ಕರ್ನಾಟಕ ವಿಧಾನ ಸಭೆ ಸಂಶೋಧನೆ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE : 20/5/2020

## ಸಕ್ಕರೆ ಸೀಮೆಯಲ್ಲಿ ಒಂದೇ ದಿನ 71 ಪ್ರಕರಣ, ರಾಜ್ಯದಲ್ಲಿ 149

# ಮಂಡ್ಯಕ್ಕೆ 'ಮುಂಬೈ' ಸೋಂಕು

20-5-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ 71 ಸೇರಿದಂತೆ ರಾಜ್ಯದಲ್ಲಿ ಮಂಗಳವಾರ ಒಂದೇ ದಿನ 149 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ಒಂದು ದಿನ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿದ್ದು, ಸೋಂಕಿತರ ಸಂಖ್ಯೆ 1,395ಕ್ಕೆ ತಲುಪಿದೆ.

ಮುಂಬೈಗೆ ಪ್ರಯಾಣ ಮಾಡಿದ ಇತಿಹಾಸ ಹೊಂದಿದವರಿಂದ ಮಂಡ್ಯದಲ್ಲಿ ಸೋಂಕಿತರ ಸಂಖ್ಯೆ ಏರುತ್ತಲೇ ಇದೆ. ಇದರಿಂದಾಗಿ, ಕೊರೊನಾ ಸೋಂಕಿತ ಜಿಲ್ಲೆಗಳ ಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದ್ದ ಮಂಡ್ಯ ಒಂದೇ ದಿನದಲ್ಲಿ 2ನೇ ಸ್ಥಾನಕ್ಕೆ ಬಂದಿದೆ. ಸೋಂಕಿತರ ಸಂಖ್ಯೆ 160ಕ್ಕೆ ಏರಿದೆ. 1 ವರ್ಷದ ಮಗು ಸೇರಿದಂತೆ ಮಂಡ್ಯದ 71 ಮಂದಿಯೂ ಮುಂಬೈಗೆ ಪ್ರಯಾಣ ಮಾಡಿದ ಇತಿಹಾಸವನ್ನು ಹೊಂದಿದ್ದಾರೆ.

ಮುಂಬೈನಿಂದ ಈ ಜಿಲ್ಲೆಗೆ 1,173 ಮಂದಿ ಬಂದಿದ್ದಾರೆ. ಇದೇ 15 ಮತ್ತು 16ರಂದು ಜಿಲ್ಲೆಗೆ ಬಂದ ವಲಸಿಗರ ಪೈಕಿ 71 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಅವರಲ್ಲಿ 50 ಮಂದಿ ಕೆ.ಆರ್.ಪೇಟೆ ತಾಲ್ಲೂಕಿನವರಾದರೆ, ಉಳಿದವರು ನಾಗಮಂಗಲ ತಾಲ್ಲೂಕಿನವರಾಗಿದ್ದಾರೆ.

ಲಾಕ್‌ಡೌನ್ ತೆರವಾದ ಬೆನ್ನಲ್ಲೇ, ರಾಜ್ಯದಲ್ಲಿ ಸೋಂಕಿತರ ಸಂಖ್ಯೆ ಒಂದೇ ಸಮನೆ ಏರಿಕೆಯಾಗುತ್ತಿದೆ. ಮೂರು ದಿನಗಳಲ್ಲಿ 303 ಮಂದಿಗೆ ಸೋಂಕು ಹರಡಿದೆ. ಇವರಲ್ಲಿ ಬಹುತೇಕರು ಅನ್ಯ ರಾಜ್ಯಗಳಿಂದ ವಾಪಸಾದವರು.

ಈ ನಡುವೆ ಸರ್ಕಾರವು ಪ್ರಯೋಗಾಲಯಗಳ ಸಂಖ್ಯೆಯನ್ನೂ 46ಕ್ಕೆ ಏರಿಕೆ ಮಾಡಿ, ಕೋವಿಡ್ ಪರೀಕ್ಷಾ ಸಾಮರ್ಥ್ಯವನ್ನು 8 ಸಾವಿರಕ್ಕೆ ಏರಿಸಿದೆ.



ಕಲಬುರ್ಗಿಯ ಮೋಮಿನಪುರ ಕಂಟೈನ್‌ಮೆಂಟ್ ಪ್ರದೇಶದಲ್ಲಿ ಪೊಲೀಸ್ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ಮಂಗಳವಾರ ಪಿಪಿಇ ಕಿಟ್ ಧರಿಸಿ ಕರ್ತವ್ಯ ನಿರ್ವಹಿಸಿದರು —ಪ್ರಜಾವಾಣಿ ಚಿತ್ರ

| | | | |
|---|---|---|---|
| **60,606** ದೇಶದಲ್ಲಿ ಬಾಧಿತರು | 41,747 ಗುಣಮುಖ | **1,05,498** ಒಟ್ಟು | 3,145 ಸಾವು |
| ದಿನದ ಚಿತ್ರಣ | 3,298 ಗುಣಮುಖ | **5,496** ಹೊಸಪ್ರಕರಣ | 73 ಸಾವು |

ಇದರಿಂದ ಕೂಡ ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬರಲಾರಂಭಿಸಿವೆ. ಕೊರೊನಾ ಸೋಂಕಿತ ರಾಜ್ಯಗಳ ಪಟ್ಟಿಯಲ್ಲಿ 13ನೇ ಸ್ಥಾನದಲ್ಲಿದ್ದ ಕರ್ನಾಟಕ ಈಗ 12ನೇ ಸ್ಥಾನಕ್ಕೆ ಬಂದಿದೆ.

ಮಂಡ್ಯದಲ್ಲಿ 71, ದಾವಣಗೆರೆಯಲ್ಲಿ 22, ಕಲಬುರ್ಗಿಯಲ್ಲಿ 13, ಶಿವಮೊಗ್ಗದಲ್ಲಿ 10, ಬೆಂಗಳೂರಿನಲ್ಲಿ 6, ಬಾಗಲಕೋಟೆಯಲ್ಲಿ 5, ಚಿಕ್ಕಮಗಳೂರಿನಲ್ಲಿ 5, ಉಡುಪಿಯಲ್ಲಿ 4, ಉತ್ತರ ಕನ್ನಡದಲ್ಲಿ 4, ಹಾಸನದಲ್ಲಿ 3 ಹಾಗೂ ಯಾದಗಿರಿ, ಗದಗ, ಚಿತ್ರದುರ್ಗ, ರಾಯಚೂರು, ಬೀದರ್, ವಿಜಯಪುರದಲ್ಲಿ ತಲಾ ಒಂದು ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಇದರಿಂದಾಗಿ ಸೋಂಕಿತರ ಸಂಖ್ಯೆ ಮಂಗಳವಾರ ಒಂದೇ ದಿನ ಶತಕದ ಗಡಿ ದಾಟಿದೆ. ಅದರಲ್ಲಿ 113 ಮಂದಿ ಹೊರರಾಜ್ಯಕ್ಕೆ ಹೋಗಿ ಬಂದವರು.

ದಾವಣಗೆರೆಯಲ್ಲಿ ರೋಗಿಗಳ ಸಂಪರ್ಕ ಹಾಗೂ ಕಂಟೈನ್‌ಮೆಂಟ್ ವಲಯದಲ್ಲಿ ಸಂಚಾರದಿಂದ 17 ಮಂದಿಗೆ ಸೋಂಕು ಹರಡಿದೆ.

ಹಸಿರು ವಲಯವಾಗಿದ್ದ ಚಿಕ್ಕಮಗಳೂರಿಗೂ ಸೋಂಕು ಪ್ರವೇಶಿಸಿದೆ. ರಾಜ್ಯದ 28 ಜಿಲ್ಲೆಗಳನ್ನು ಕೋವಿಡ್ ವ್ಯಾಪಿಸಿಕೊಂಡಂತಾಗಿದೆ.

ಶಿವಮೊಗ್ಗದಲ್ಲಿ ವರದಿಯಾದ ಪ್ರಕರಣಗಳಲ್ಲಿ ಬಹುತೇಕರು ವಿವಿಧ ರಾಜ್ಯಗಳಿಂದ ಬಂದರಾಗಿದ್ದಾರೆ. ಶಿಕಾರಿಪುರದ ಗ್ರಾಮವೊಂದರ 'ಪೋಕ್ಸೊ' ಪ್ರಕರಣದ ಸಂತ್ರಸ್ತೆಗೂ (15 ವರ್ಷದ ಬಾಲಕಿ) ಸೋಂಕು ಇದೆ. ಈ ಬಾಲಕಿ ಒಂದೂವರೆ ತಿಂಗಳ ಗರ್ಭಿಣಿ. ಶಿವಮೊಗ್ಗದಲ್ಲಿ ವರದಿಯಾದ ಪ್ರಕರಣಗಳಲ್ಲಿ 8 ಮಂದಿ ಮುಂಬೈ, ಆಂಧ್ರಪ್ರದೇಶ ಹಾಗೂ ಕೇರಳದಿಂದ ವಾಪಸಾದವರು.

ಉಡುಪಿ ಹಾಗೂ ಹಾಸನದಲ್ಲಿ ವರದಿಯಾದ ಪ್ರಕರಣಗಳಿಗೂ ಮುಂಬೈನ ನಂಟಿದೆ.

ಇನ್ನಷ್ಟು ಸುದ್ದಿಗಳು 3,7

### 40ಕ್ಕೆ ಮುಟ್ಟಿತು ಮೃತರ ಸಂಖ್ಯೆ

ಕೋವಿಡ್ ಪೀಡಿತರ ಪೈಕಿ ಮಂಗಳವಾರ ಮೂವರು ಮೃತಪಟ್ಟಿದ್ದು, ಸಾವಿಗೀಡಾದವರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ. ತೀವ್ರ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಬಳ್ಳಾರಿಯ 61 ವರ್ಷದ ಪುರುಷ ಕೊನೆಯುಸಿರೆಳೆದಿದ್ದಾರೆ. ಅವರು ಇತ್ತೀಚೆಗೆ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ವಿಜಯಪುರದಲ್ಲಿ 65 ವರ್ಷದ ವೃದ್ಧ ಹಾಗೂ ಬೆಂಗಳೂರಿನಲ್ಲಿ 54 ವರ್ಷದ ಪುರುಷ ಸೋಮವಾರ (ಮೇ 18) ನಿಧನರಾಗಿದ್ದರು. ಅವರ ಗಂಟಲ ದ್ರವವನ್ನು ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. ಪರೀಕ್ಷಾ ವರದಿಯಲ್ಲಿ ಸೋಂಕು ತಗುಲಿರುವುದು ದೃಢಪಟ್ಟಿದೆ. ಇದರಿಂದಾಗಿ ಮೃತರ ಸಂಖ್ಯೆ ವಿಜಯಪುರದಲ್ಲಿ 4 ಹಾಗೂ ಬೆಂಗಳೂರಿನಲ್ಲಿ 8ಕ್ಕೆ ತಲುಪಿದೆ. ರಾಜ್ಯದಲ್ಲಿ ಮರಣ ಪ್ರಮಾಣ 2.8 ರಷ್ಟಿದೆ.